

# ಜಾಕ್ವೆಲಿನ್ ಸಂಗೀತ!

ಮಾಜಿ ಕ್ರಿಕೆಟಿಗ, ರಾಜಕಾರಣಿ ಮಹಮದ್ ಅಜರುದ್ದೀನ್ ಅವರ ಜೀವನವನ್ನು ನಿರ್ದೇಶಕ ಆಂಥೋಣಿ ಡಿಸೋಜಾ ತೆರೆಯ ಮೇಲೆ ತರಲು ಹೊರಟಿರುವ ಸುದ್ದಿ ಹಳತು. ಅಜರುದ್ದೀನ್ ವೃತ್ತಿ ಬದುಕಿನಷ್ಟೇ ವೈಯಕ್ತಿಕ ಬದುಕೂ ವರ್ಣಮಯ. ‘ಮಿಸ್ ಇಂಡಿಯಾ’ ಆಗಿ ಮಿಂಚಿದ್ದ ರೂಪದರ್ಶಿ, ನಟಿ ಸಂಗೀತಾ ಬಿಜಲಾನಿ ಅವರನ್ನು ವರಿಸಿದ್ದ ಅವರ ವೈವಾಹಿಕ ಬದುಕೂ ವಿವಾದದಿಂದ ಹೊರತಲ್ಲ.

ತೆರೆ ಮೇಲೆ ಅಜರುದ್ದೀನ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದು ಇಮ್ರಾನ್ ಹಷ್ಮಿ. ಅಜರುದ್ದೀನ್ ಮೊದಲ ಪತ್ನಿ ನೌರೀನ್ ಪಾತ್ರಕ್ಕೆ ಪ್ರಾಚಿ ದೇಸಾಯಿ ಆಯ್ಕೆಯಾಗಿದ್ದರು. ಆದರೆ ಅವರ ಎರಡನೇ ಪತ್ನಿಯ ಪಾತ್ರಕ್ಕೆ ಯಾರು ಆಯ್ಕೆಯಾಗುತ್ತಾರೆ ಎನ್ನುವುದು ಕಗ್ಗಂಟಾಗಿತ್ತು. ಆರಂಭದಿಂದಲೂ ಈ ಪಾತ್ರಕ್ಕೆ ಕೇಳಿ ಬಂದಿದ್ದ ಹೆಸರು ಕರೀನಾ ಕಪೂರ್ ಅವರದು. ಆದರೆ ‘ಉಡ್ತಾ ಪಂಜಾಬ್’ ಚಿತ್ರದಲ್ಲಿ ಬಿಜಿಯಾಗಿರುವ ಕರೀನಾ ಈ ಚಿತ್ರಕ್ಕೆ ಲಭ್ಯರಿಲ್ಲ. ಸಂಗೀತಾ ಬಿಜಲಾನಿ ಪಾತ್ರವನ್ನು ಪೋಷಿಸುವವರು ಇನ್ಯಾರು? ಎಂಬ ಪ್ರಶ್ನೆಗೆ ಶ್ರೀಲಂಕಾದ ಬೆಡಗಿ ಜಾಕ್ವೆಲಿನ್ ಫರ್ನಾಂಡಿಸ್ ಎಂಬ ಉತ್ತರ ಬಿಟೌನ್‌ನಲ್ಲಿ ಪ್ರತಿಧ್ವನಿಸುತ್ತಿದೆ.

‘ಹೌಸ್‌ಫುಲ್’, ‘ಮರ್ಡರ್ 2’, ‘ಹೌಸ್‌ಫುಲ್ 2’ ಮುಂತಾದ ಚಿತ್ರಗಳಲ್ಲಿ ನಟಿಸಿದ್ದ ಜಾಕ್ವೆಲಿನ್ ದೆಸೆ ಬದಲಾಗಿದ್ದು ಸಲ್ಮಾನ್ ಜತೆಗೆ ನಟಿಸಿದ ‘ಕಿಕ್’ ಚಿತ್ರದಿಂದ.

ಈಗ ಬಾಲಿವುಡ್‌ನಲ್ಲಿ ಜಾಕ್ವೆಲಿನ್‌ಗೆ ಬಹು ಬೇಡಿಕೆ. ಸಿನಿಮಾ ಹೊರತಾದ ಕಾರ್ಯಕ್ರಮಗಳಲ್ಲಿಯೂ ಅವರ ಸಂಭಾವನೆ ಮೊತ್ತದಲ್ಲಿ ಭಾರಿ ಏರಿಕೆಯಾಗಿದೆ. ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಮೂರು ನಿಮಿಷ ನರ್ತಿಸಲು ಅವರು ತೆಗೆದುಕೊಂಡಿದ್ದು ಬರೋಬ್ಬರಿ ₹75 ಲಕ್ಷ. ಹೆಚ್ಚಿನ ನಟ–ನಟಿಯರು ಟ್ವಿಟ್ಟರ್, ಫೇಸ್‌ಬುಕ್‌ನಲ್ಲಿ ಸಾಮಾಜಿಕ ಕಳಕಳಿಯ ಬಗ್ಗೆ ಮಾತನಾಡುತ್ತಿದ್ದರೆ, ಜಾಕ್ವೆಲಿನ್ ಅದನ್ನು ಕಾರ್ಯಗತಗೊಳಿಸುತ್ತಿದ್ದಾರೆ. ಬಡಮಕ್ಕಳಿಗೆ ನೆರವಾಗುವ ಉದ್ದೇಶದಿಂದ ಸ್ವಯಂಸೇವಾ ಸಂಸ್ಥೆಯೊಂದಕ್ಕೆ ಹಣ ಹೊಂದಿಸುವ ಕೆಲಸವನ್ನೂ ಅವರು ಮಾಡುತ್ತಿದ್ದಾರಂತೆ. ನಟನೆ, ಬದುಕು, ಸಮಾಜಮುಖಿ ಕೆಲಸಗಳಿಂದ ಇತರ ನಟಿಯರಿಗಿಂತ ವಿಭಿನ್ನವಾಗಿ ಕಾಣಿಸಿಕೊಳ್ಳುತ್ತಿದ್ದಾರೆ ಜಾಕ್ವೆಲಿನ್.

# ತಾಪಸಿ ತಿಲ್ಲಾನ!

‘ಚಷ್ಮೆ ಬದ್ದೂರ್’ ಚಿತ್ರದ ಮೂಲಕ ಬಾಲಿವುಡ್‌ಗೆ ಅಡಿಯಿಟ್ಟ ಬೆಡಗಿ ತಾಪಸಿ ಪನ್ನು, ತಾನೆಲ್ಲಿ ಏಕತಾನತೆಯ ಪಾತ್ರಗಳಿಗೆ ಸೀಮಿತವಾಗಿಬಿಡುತ್ತೇನೋ ಎಂಬ ಭಯದಲ್ಲಿದ್ದರು. ಏಕೆಂದರೆ ಒಂದು ಮಾದರಿ ಪಾತ್ರದಲ್ಲಿ ಕಾಣಿಸಿಕೊಂಡ ಕಲಾವಿದರನ್ನು ಮತ್ತೆ ಮತ್ತೆ ಅದೇ ಬಗೆಯ ಪಾತ್ರಗಳು ಹುಡುಕಿಕೊಂಡು ಬರುತ್ತವೆ.

ಆ ಏಕತಾನತೆಯಿಂದ ಕಲಾವಿದ ಮಾತ್ರವಲ್ಲ, ಪ್ರೇಕ್ಷಕನೂ ರೋಸಿ ಹೋಗುತ್ತಾನೆ. ದಕ್ಷಿಣದ ಚಿತ್ರರಂಗದಲ್ಲಿ ಮೊದಲು ನೆಲೆಯೂರಿದ ದೆಹಲಿಯ ಈ ಚೆಲುವೆ, ಹೆಚ್ಚಾಗಿ ಕಾಣಿಸಿಕೊಂಡಿದ್ದು ಕಾಲೇಜು ವಿದ್ಯಾರ್ಥಿನಿ ಪಾತ್ರದಲ್ಲಿ. ಬಾಲಿವುಡ್‌ಗೆ ಪ್ರವೇಶ ಪಡೆದ ‘ಚಷ್ಮೆ ಬದ್ದೂರ್’ನಲ್ಲಿಯೂ ಇದೇ ಬಗೆಯ ಪಾತ್ರ. ಇನ್ನು ಬಾಲಿವುಡ್ ಪಾಲಿಗೆ ತಾನು ಕಾಯಂ ವಿದ್ಯಾರ್ಥಿನಿಯೇ ಸರಿ ಎಂದು ಹೆದರಿದ್ದರು ತಾಪಸಿ. ಅದು ಸರಿ ಎನ್ನುವಂತೆ ಅವರಿಗೆ ಬಂದ ಅವಕಾಶಗಳೆಲ್ಲದರಲ್ಲೂ ಇದ್ದದ್ದು ವಿದ್ಯಾರ್ಥಿನಿಯ ಪಾತ್ರವೇ. ಈ ಕಾರಣಕ್ಕಾಗಿಯೇ ಅವರು ಕೆಲವು ಸಿನಿಮಾಗಳಲ್ಲಿ ಒಪ್ಪಿಕೊಳ್ಳಲು ಹಿಂದೇಟು ಹಾಕಿದ್ದರು. ‘ಬೇಬಿ’ ಅವರ ಆತಂಕವನ್ನು ದೂರಮಾಡಿದೆಯಂತೆ. ಅಕ್ಷಯ್ ಕುಮಾರ್ ಅಭಿನಯದ ‘ಬೇಬಿ’ ವಿಮರ್ಶಕರು, ಚಿತ್ರಪ್ರೇಮಿಗಳಿಂದ ಪ್ರಶಂಸೆಗೆ ಒಳಗಾಗಿರುವ ಚಿತ್ರ. ಇದರಲ್ಲಿ ಸಿಕ್ಕ ವಿಭಿನ್ನ ಪಾತ್ರ ಅವರಿಗೆ ಅತ್ಯುತ್ಸಾಹ, ಖುಷಿ ನೀಡಿದೆಯಂತೆ.

‘ನಾನು ಏಕತಾನತೆಯ ಪಾತ್ರಗಳಿಗೆ ಸಿಲುಕುತ್ತೇನೆ. ಅದರ ಹೊರತಾದ ಪಾತ್ರಗಳು ನನಗೆ ಸಿಗಲಾರದು ಎಂದೇ ಭಾವಿಸಿದ್ದೆ. ಕಾಲೇಜು ವಿದ್ಯಾರ್ಥಿನಿ ಪಾತ್ರವೆಂದರೆ ತಾಪಸಿ ಎನ್ನುವಂತಹ ಮುದ್ರೆ ದೊರಕುವ ಮುನ್ನ ‘ಬೇಬಿ’ಯಂತಹ ಚಿತ್ರದಲ್ಲಿ ಬೇರೆ ರೀತಿ ಕಾಣಿಸಿಕೊಳ್ಳಬೇಕಿತ್ತು. ಅದಕ್ಕಾಗಿ ಖುಷಿ ಪಡುತ್ತಿದ್ದೇನೆ’ ಎಂದಿದ್ದಾರೆ ಅವರು. ಈ ಹೊತ್ತಿನಲ್ಲಿಯೇ ತಾವು ನಟಿಯಾಗಿ ಬೆಳೆದದ್ದು ಇನ್ನೂ ಅಚ್ಚರಿಯೇ ಸರಿ ಎಂದು ಅವರು ಸಾಗಿ ಬಂದ ದಾರಿಯತ್ತ ಹೊರಳಿದ್ದಾರೆ. ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ತಾಪಸಿ ನಟಿಯಾಗುತ್ತೇನೆ ಎಂದು ಯಾವತ್ತೂ ಯೋಚಿಸಿರಲಿಲ್ಲವಂತೆ. ಹಾಗೆ ಆಕಸ್ಮಿಕವಾಗಿ ಬಣ್ಣದ ಬದುಕಿಗೆ ಕಾಲಿಟ್ಟಾಗಲೂ ಅದು ತನ್ನದಲ್ಲದ ವೃತ್ತಿ ಎಂದೇ ಭಾವಿಸಿದ್ದರು. ನಟನೆಗಿಂತ ಅವರಿಗೆ ಓದಿನಲ್ಲೇ ಆಸಕ್ತಿ. ಆದರೆ ಹಣೆಬರಹದಲ್ಲಿ ಬೇರೆಯದೇ ಬರೆದಿದ್ದರೆ, ಅದೇ ಆಗುತ್ತದೆ ಎನ್ನುವ ತಾಪಸಿಗೆ ಅದೃಷ್ಟ ತಮಿಳು, ಹಿಂದಿಯಲ್ಲಿ ಖುಲಾಯಿಸುತ್ತಿದೆ.

■ ಅಮಿ

